# ಹರಿನಾರಾಯಣ ಹರಿನಾರಾಯಣ ಎನು ಮನವೆ

(Version – 1)

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Note:** The wordings are as per Ref. 1. The lyrics in Ref. 2 are similar to Ref. 1 except few differences which are marked in yellow highlights.
4. Note: Singer has followed the lyrics as in Ref. 2.

ರಾಗ: ಶಂಕರಾಭರಣ ತಾಳ: ಆದಿ

ಹರಿ ನಾರಾಯಣ ಹರಿ ನಾರಾಯಣ
ಹರಿ ನಾರಾಯಣ (ನೆನೆ) (ಎನು) ಮನವೆ || ಪ ||

ನಾರಾಯಣನೆಂಬ ನಾಮದ ಬೀಜವ
ನಾರದ ಭಿತ್ತಿದ ಧರೆಯೊಳಗೆ || ಅಪ ||

ತರಳ ಧ್ರುವನಿಂದ ಅಂಕುರಿಸಿತು ಅದು
ವರ ಪ್ರಹ್ಲಾದನಿಂದ ಮೊಳಕೆಯಾಯ್ತು
ಧರಣೀಶ ರುಕುಮಾಂಗದನಿಂದ ಚಿಗುರಿತು
ಕುರು ಪಿತಾಮಹನಿಂದ ಹೂವಾಯ್ತು || 1 ||

ವಿಜಯನ ಸತಿಯಿಂದ (ಫಲವಾಯ್ತು) (ಕಾಯಾಯ್ತು) ಅದು
ಗಜೇಂದ್ರನಿಂದ ದೋರೆ ಹಣ್ಣಾಯ್ತು
ದ್ವಿಜ ಶುಕ ಮುನಿಯಿಂದ (ಫಲ ಪಕ್ವವಾಯಿತು) (ಪರಿಪಕ್ವವಾಯಿತು)
ಅಜಮಿಳ ತಾನುಂಡು ರಸ ಸವಿದ || 2 ||

ಕಾಮಿತ ಫಲವೀವ ನಾಮವೊಂದಿರಲಾಗಿ
ಹೋಮ ನೇಮ ಜಪ ತಪವೇಕೆ
ಸ್ವಾಮಿ ಶ್ರೀ ಪುರಂದರ (ವಿಠ್ಠಲ ರಾಯನ) (ವಿಠ್ಠಲನ ನಾಮವ)

ನೇಮದಿಂದಲಿ ನೀ ನೆನೆ ಮನವೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಕುರು ಪಿತಾಮಹ** – ಭೀಷ್ಮ. ಭಾರತಯುದ್ಧವಾದ ಮೇಲೆ ಭೀಷ್ಮನು ಶರಶಯ್ಯೆಯ ಮೇಲೆ ಮಲಗಿರುತ್ತ, ಕೃಷ್ಣನನ್ನು ಸ್ತೋತ್ರ ಮಾಡಿದ ಪ್ರಸಂಗ ಮಹಾಭಾರತದ ಶಾಂತಪರ್ವದಲ್ಲಿ ಬರುತ್ತದೆ. ಈ ಭಾಗವು ಭೀಷ್ಮಸ್ತವರಾಜವೆಂದೇ ಪ್ರಸಿದ್ಧವಾಗಿದೆ.

**ವಿಜಯನ ಸತಿ** – ದ್ರೌಪದಿ; ವಿಜಯವೆಂಬುದು ಅರ್ಜುನನ ಹೆಸರುಗಳಲ್ಲೊಂದು.

**ಶುಕಮುನಿ** – ಭಾಗವತವನ್ನು ಏಳುದಿನಗಳ ಕಾಲ ಪರೀಕ್ಷಿದ್ರಾಜನಿಗೆ ಶುಕಮುನಿಯು ಶ್ರವಣಮಾಡಿಸಿದುದು ಭಾಗವತಧರ್ಮ ಬೇರೂರಲು ಕಾರಣವಾಯಿತು.

**ರಸ** – ಭಕ್ತಿಯ ಸಾರವೆಂದರೆ ನಾಮಸ್ಮರಣೆ; ಅಜಾಮಿಳನು ಮಾಡಿದ್ದು ಇದನ್ನೇ.

**ಹೋಮ ನೇಮ ಜಪ ತಪವೇಕೆ** – ವ್ಯಾಸರಾಯ ಸ್ವಾಮಿಗಳು.

‘ಅನ್ಯದೇವತೆಯಾಕೆ ಅನ್ಯಪ್ರತಿಮೆಯು ಯಾಕೆ

ಅನ್ಯವಾದ ಮಂತ್ರ ತಂತ್ರ ವ್ಯಾಕೆ

ಎನ್ನಲ್ಲಿ ಭರಿತ ಸಾಧನಂಗಳಿರುತಿರೆ

ಚೆನ್ನಾಗಿ ಶ್ರೀಕೃಷ್ಣಸ್ವಾಮಿಯ ಪೂಜಿಪೆ’

ಎಂದು ಹೇಳಿರುವುದರ ಛಾಯೆ.

**Classification:** Keerthane
**Ankita:** sri purandara vittala
**Location:** NA
**Category:** Vishnu Stuti, nama mahatme
**Sub-Category:** Vishnu, Krishna, Narayana, narada, bhumi, homa, yaga, japa, gaja, hannu, gili, ajamila, Dhruva, prahallada, rukmangada, muni,
**Pravachana:** NA
**Explanation:** NA